**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಕೆ.ಆರ್.ನಗರ**

**ಸಿ.ಸಿ. ನಂ.587/2020**

**ಪಿರ್ಯಾದಿದಾರರುಃ** ಸಾಲಿಗ್ರಾಮ ಪೋಲೀಸ್ ಠಾಣೆ

**- ವಿರುದ್ಧ –**

**ಆರೋಪಿತರುಃ** ಮಹೇಶ ಬಿನ್ ರಾಮಯ್ಯ
ವಃ 32 ವರ್ಷ
ವಾಸಃ ನರಚನಹಳ್ಳಿ ರಸ್ತೆ,
ಕೆ.ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ದಂ. ಪ್ರ. ಸಂ. ಕಲಂ 313 ರಡಿ ಆಪಾದಿತರ ಹೇಳಿಕೆ**

ಪ್ರಶ್ನೆ 1: ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀವು ಕೇಳಿರುವಿರಾ?
ಉತ್ತರಃ

ಪ್ರಶ್ನೆ 2: ಫ್ರಾಸಾ.2 ಶೇಖರ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ 2019 ರ ಡಿಸೆಂಬರ್ ತಿಂಗಳಿನಲ್ಲಿ ಸಂಜೆ 4 ಗಂಟೆಗೆ ಹುಲ್ಲಿನ ಮೇದೆಯ ವಿಚಾರಕ್ಕೆ ಆರೋಪಿಯಾದ ನಿಮ್ಮ ಮತ್ತು ಚಾಸಾ–1 ರವರು ಮಧ್ಯೆ ಜಗಳವಾಗಿರುತ್ತದೆ ಎಂದು, ಆರೋಪಿಯಾ ನೀವು ಕಲ್ಲಿನಿಂದ ಚಾಸಾ 1 ರವರ ತಲೆಗೆ ಹೊಡೆದು ಹಲ್ಲೆ ಮಾಡಿದ್ದು, ಚಾಸಾ 1 ರವರ ತಲೆಗೆ ರಕ್ತಗಾಯವಾಗಿ, ಪ್ರಜ್ಞೆ ತಪ್ಪಿ ಬಿದ್ದಿರುತ್ತಾರೆ ಎಂದು, ಚಾಸಾ 1 ರವರನ್ನು ತಾನು ಚಿಕಿತ್ಸೆಗಾಗಿ ಸಾಲಿಗ್ರಾಮದ ಸರಕಾರಿ ಆಸ್ಪತ್ರೆಗೆ ಆಟೋದಲ್ಲಿ ಕರೆದುಕೊಂಡು ಹೋಗಿರುತ್ತೇನೆ ಹಾಗೂ ಪೋಲಿಸರು ಆಸ್ಪತ್ರೆಗೆ ಬಂದು ಚಾಸಾ 1 ರವರ ಹೇಳಿಕೆಯನ್ನು ಪಡೆದಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?
ಉತ್ತರಃ

ಪ್ರಶ್ನೆ 3: ಫ್ರಾಸಾ.2 ರವರು ತಮ್ಮ ಪಾಟೀ ಸವಾಲಿನಲ್ಲಿ ಚಾಸಾ 1 ರವರ ಗಾಯದಿಂದ ರಕ್ತ ಹರಿದು ಅವರ ಬಟ್ಟೆಗೆ ರಕ್ತದ ಕಲೆಯಾಗಿತ್ತು ಎಂದು, ಘಟನಾ ದಿನದಂದು ತಾನು ಚಾಸಾ 1

ರವರನ್ನು ನನ್ನ ಬಾಮೈದನಾದ ಚಾಸಾ 6 ರವರ ಆಟೋದಲ್ಲಿ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇನೆ ಎಂದು ಹಾಗೂ ಸ್ಥಳ ಪಂಚನಾಮೆಯ ದಾಖಲೆ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 4: ಫ್ರಾಸಾ.3 ರಾಜಮ್ಮ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಹುಲ್ಲಿನ ಮೇದೆಯ ವಿಚಾರಕ್ಕೆ ಆರೋಪಿಯಾದ ನಿಮ್ಮ ಹಾಗೂ ಚಾಸಾ-1 ರವರ ಮಧ್ಯೆ ಕಲ್ಲಿನಿಂದ ಜಗಳವಾಗಿರುತ್ತದೆ ಎಂದು ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ 5: ಫ್ರಾಸಾ.4 ಡಾಃ ಅಶೋಕ ಹೆಚ್.ಎನ್ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ23.12.2019 ರಂದು ತಾನು ಕರ್ತವ್ಯದಲ್ಲಿದ್ದಾಗ ಸಂಜೆ 5.45 ಗಂಟೆಗೆ ಚಾಸಾಃ1 ರವರು ಹಲ್ಲೆಯ ಹಿನ್ನಲೆಯಲ್ಲಿ ಚಿಕಿತ್ಸೆಗಾಗಿ ಚಾಸಾ 2 ರವರ ಜೊತೆ ಬಂದಿದ್ದು, ಚಾಸಾ 1 ರವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ 1 ರವರ ತಲೆಯ ಹಿಂಭಾಗದಲ್ಲಿ 2 x 1/4 ಸೆ.ಮೀ ಆಳದ ಹರಿದ ಗಾಯವಾಗಿತ್ತು. ನನ್ನ ಅಭಿಪ್ರಾಯದ ಪ್ರಕಾರ ಚಾಸಾ1 ರವರಿಗೆ ಆದ ಸದರಿ ಗಾಯಗಳು ಸಾದಾ ಸ್ವರೂಪದ ಗಾಯವಾಗಿರುತ್ತವೆ ಎಂದು, ಚಾಸಾ 1 ರವರನ್ನು ತಪಾಸಣೆ ಮಾಡಿದ ಬಗ್ಗೆ ತಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದು ಸದರಿ ಗಾಯ ಪ್ರಮಾಣಪತ್ರ ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿ ಸಾಕ್ಷ್ಯನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರಶ್ನೆ.6: ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರಶ್ನೆ.7: ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಶ್ನೆ.8: ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

ಉತ್ತರಃ

(ಈ ಮೇಲೆ ಹೇಳಿದ ಸಾಕ್ಷಿಯ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃಢೀಕರಿಸಲಾಯಿತು)

ದಿನಾಂಕಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಕೃಷ್ಣರಾಜನಗರ.